ಸಾಕ್ಷಿಯನ್ನು ದಿಃ 08-12-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ </u>ಶ್ರೀ ಬಿ.ಎಸ್.ಪಿ. 1 ನೇ ಪ್ರತಿವಾದಿ ಪರ ವಕೀಲರಿಂದ

2011 ನೇ ಸಾಲಿಲನಲ್ಲಿ 1 ನೇ ಪ್ರತಿವಾದಿಯು ಸರ್ವೆ ನಂ. 149/2 ನ್ನು 2 ರಿಂದ 5 ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ. 2011 ರಿಂದ ಸದರಿ ಜಮೀನನ್ನು 2 ರಿಂದ 5 ರಿಂದ ಪ್ರತಿವಾದಿಯು ಸಾಗುವಳಿ ಮಾಡುತ್ತಾ ಬಂದಿರುತ್ತಾರೆಂದರೆ ಸರಿ. 2011 ನೇ ಸಾಲಿನಲ್ಲಿ ಸದರಿ ಖರೀದಿ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ, ನಂತರ ಎಂದು ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಉತ್ತರ ಕೊಡದೇ ಸುಮ್ಮನೆ ನಿಂತಿರುತ್ತಾರೆ. ಸೂರಣಗಿಯ ಮಡಿವಾಳ ವಕೀಲರು ನನಗೆ ಸಂಬಂಧಿಕರು ಎಂದರೆ ಸರಿಯಲ್ಲ. 2011 ನೇ ಸಾಲಿನಲ್ಲಿ ನಾವು ವಾದಿಯರೆಲ್ಲರೂ ದಾವಾ ಆಸ್ತಿಯ ವಿಚಾರವಾಗಿ ಮಾರಾಟ ಮಾಡಲು ಹಕ್ಕನ್ನು ಮುಕ್ತಿಯಾರ ನಾಮೆ ಮುಂಖಾತರ ಬರೆದುಕೊಟ್ಟಿರುತ್ತೇವೆಂದರೆ ಸರಿಯಲ್ಲ. ಸಾಕ್ಷಿಯು ಒಂದು ಮುಕ್ತಿಯಾರ ನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದು ವಾದಿಯರದ್ದು ಅಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮೃತಪಟ್ಟ ನಂತರ ಮನೆಯ ಯಜಮಾನಿಕೆಯನ್ನು 1 ನೇ ಪ್ರತಿವಾದಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು 2 ನೇ ವಾದಿಯು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ ಒಂದು ಟ್ರ್ಯಾಕ್ಟರ ಮತ್ತು ಒಂದು ಟ್ರೇಲರ ಇತ್ತು ಎಂದರೆ ಸರಿ. ನನ್ನ ತಂದೆ ನಮ್ಮ ಮದುವೆಗಾಗಿ ಮತ್ತು ಕುಟುಂಬದ ಒಳತಿಗಾಗಿ 8 ರಿಂದ 10 ಲಕ್ಷ ಸಾಲ ಮಾಡಿದ್ದರು ಎಂದರೆ ಸಾಕ್ಷಿಯು ಟ್ರೇಲರ ಖರೀದಿ ಮಾಡಲು 4,80,000/- ಸಾಲ ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ.ಸದರಿ ಸಾಲವನ್ನು ತೀರಿಸಲು ನಾವು ವಾದಿಯರೆಲ್ಲರೂ 1 ನೇ ಪ್ರತಿವಾದಿಗೆ ಮುಕ್ತಿಯಾರ ನಾಮೆ ಮಾಡಿಕೊಟ್ಟಿರುತ್ತೇವೆಂದರೆ ಸರಿಯಲ್ಲ. ಸದರಿ ಮುಕ್ತಿಯಾರ ನಾಮೆ ಆಧಾರದ ಮೇಲೆ ತಹಶೀಲ್ದಾರವರಿಗೆ ವರದಿ ನೀಡಿ

ನಮ್ಮ ಹಕ್ಕುಗಳನ್ನು ಬಿಟ್ಟು ಕೊಟ್ಟಿರುತ್ತೇವೆಂದರೆ ಸರಿಯಲ್ಲ. ಸದರಿ ಸಾಲವನ್ನು ನನ್ನ ತಂದೆ ತೀರಿಸಿದ್ದು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

2.6 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರವನ್ನು ರದ್ದು ಪಡಿಸಲಾಗಿರುತ್ತದೆ 2022 ರಲ್ಲಿ ಸದರಿ ಖರೀದಿ ವ್ಯವಹಾರ ಆಗಿದ್ದು, ರದ್ದುಗೊಳಿಸಿದ ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ 1 ನೇ ಪ್ರತಿವಾದಿಯು ಸುಮಾರು 40 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಇರುತ್ತಾರೆ. ಅವರು ದಾವಾಗಳಿಗೆ ಸಲ್ಲಿಸಿದ ದಾಖಲೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಗೆ ಮೂಳೆ ಕ್ಯಾನ್ಸರ ಆಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.)**

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

Sd/-08.12.25

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ Sd/-

ಹಾಗೂ ಪ್ರ.ದ.ನ್ಯಾ.ದಂ. ಲಕ್ಷ್ಮೇಶ್ವರ